ಮಹಾಪೂರ್ಣರೂ ಅವನನ್ನು ಅನುಸರಿಸಿದರು. ಸ್ನಾನ ಮಾಡಿ ಹಿಂತಿರುಗಿದ ರಾಮಾನುಜರಿಗೆ ನಡೆದ ವಿಷಯವನ್ನು ದಾಶರಥಿ ಎಂಬ ಶಿಷ್ಯ ಹೇಳಿದ. ಈಗಲೇ ತಪ್ಪಿಸಿಕೊಂಡು ಹೋಗದಿದ್ದಲ್ಲಿ ಪ್ರಾಣಾಪಾಯವಿದೆಯೆಂದು ಎಚ್ಚರಿಸಿದ. ಕಡೆಗೆ ಆ ಪ್ರಾಂತ್ಯವನ್ನೇ ಬಿಟ್ಟು ಹೋಗುವುದೆಂದು ರಾಮಾನುಜರು ನಿರ್ಧರಿಸಿದರು. ಕಾವೇರಿ ನದಿಯ ದಡವನ್ನೇ ಅನುಸರಿಸಿ ಕರ್ನಾಟಕ ಪ್ರದೇಶವನ್ನು ಪ್ರವೇಶಿಸಿದರು.

ಇತ್ತ ಕೂರೇಶ, ಚೋಳರಾಜನ ಕೋಪಕ್ಕೆ ತುತ್ತಾದ. ರಾಜನ ಅಪ್ಪಣೆಯಂತೆ, ಕೂರೇಶ ಮತ್ತು ಮಹಾಪೂರ್ಣರನ್ನು ರಾಜಭಟರು ಕಾಡಿಗೆ ಕರೆದುಕೊಂಡು ಹೋಗಿ, ಅಲ್ಲಿ ಅವರ ಕಣ್ಣುಗಳನ್ನು ಕಿತ್ತುಹಾಕಿದರು. ಈ ಯಾತನೆಯನ್ನು ತಡೆಯಲಾರದೆ ಮಹಾಪೂರ್ಣರು ಅಲ್ಲಿಯೇ ಅಸು ನೀಗಿದರು. ಅಂಧನಾದ ಕೂರೇಶ ಅಲ್ಲಿಯೇ ಒಂದು ಗ್ರಾಮದಲ್ಲಿ ವಾಸಮಾಡತೊಡಗಿದ.

ಕರ್ನಾಟಕವನ್ನು ಪ್ರವೇಶ ಮಾಡಿದ ರಾಮಾನುಜರು ಮೊದಲಿಗೆ ಸಾಲಿಗ್ರಾಮ ಎಂಬ ಗ್ರಾಮವನ್ನು ತಲುಪಿದರು. ಸುತ್ತಲಿನ ಪ್ರಶಾಂತ ವಾತಾವರಣ ಅವರಿಗೆ ತುಂಬ ಹಿಡಿಸಿತು. ಅಲ್ಲಿನ ನರಸಿಂಹ ದೇವಸ್ಥಾನದಲ್ಲಿ ಅರ್ಚಕನಾಗಿದ್ದ ಎಡುಹ ನಂಬಿ ಎಂಬಾತ ಅವರ ಶಿಷ್ಯನಾದ. ಸುತ್ತಲಿನ ಜನರು ರಾಮಾನುಜರನ್ನು ಕಾಣಲು ತಂಡತಂಡವಾಗಿ ಬರಲಾರಂಭಿಸಿದರು. ಆ ಊರಿಗೆ ರಾಮಾನುಜರು ಭೇಟಿಕೊಟ್ಟ ಕುರುಹಾಗಿ 'ಶ್ರೀಪಾದತೀರ್ಥ' ಎಂಬ ಕೊಳ ನಿರ್ಮಾಣವಾಯಿತು. ಶ್ರೀವೈಷ್ಣವರಿಗೆ ಅತ್ಯಂತ ಪವಿತ್ರವಾದ ಕ್ಷೇತ್ರವಿದು.

## ಬಿಟ್ಟಿದೇವ ವಿಷ್ಣುವರ್ಧನನಾದದ್ದು

ಮುಂದೆ ರಾಮಾನುಜರು ಪೂರ್ವ ದಿಕ್ಕಿನೆಡೆಗೆ ಪ್ರಯಾಣ ಮಾಡಿ, ತೊಂಡನೂರನ್ನು ತಲುಪಿದರು. ಆಗ ಅದು ಹೊಯ್ಸಳರ ರಾಜಧಾನಿಯಾಗಿತ್ತು. ಬಿಟ್ಟಿದೇವ ಅದನ್ನು ಆಳುತ್ತಿದ್ದನು. ಆತನ ಮಗಳಿಗೆ ಮತಿಭ್ರಮಣೆಯಾಗಿತ್ತು. ಚೋಳದೇಶದ ರಾಜಕುಮಾರಿಯ ಖಾಯಿಲೆಯನ್ನು ಹಿಂದೊಮ್ಮೆ ರಾಮಾನುಜರು ಗುಣಪಡಿಸಿದ್ದರು. ಈ ಸಮಾಚಾರ ಎಲ್ಲರಿಗೂ ಗೊತ್ತಾಗಿತ್ತು. ತನ್ನ ಮಗಳನ್ನು ಗುಣಪಡಿಸಬೇಕೆಂದು, ಬಿಟ್ಟಿದೇವ ರಾಮಾನುಜರಿಗೆ ಹೇಳಿಕಳಿಸಿದ. ಮೊದಮೊದಲು ಅವರು ಹೋಗಲಿಲ್ಲ. ಸಹಾಯ ಮಾಡಲೇಬೇಕೆಂದು ಬಿನ್ನವಿಸಿಕೊಂಡ ಮೇಲೆ ರಾಜನ ಹತ್ತಿರ ಹೋದರು; ಅವನ ಮಗಳನ್ನು ಗುಣಪಡಿಸಿದರು. ಇದರಿಂದ ಬಿಟ್ಟಿದೇವನಿಗೆ ಬಹಳ ಸಂತೋಷವಾಯಿತು. ಅಲ್ಲದೆ ಅವನು ಶ್ರೀವೈಷ್ಣವ ಸಿದ್ಧಾಂತದ ಕಡೆಗೆ ಆಕರ್ಷಿತನಾದ. ರಾಮಾನುಜರು ಆತನಿಗೆ ಶ್ರೀವೈಷ್ಣವದೀಕ್ಷೆಯನ್ನು ಕೊಟ್ಟು, 'ವಿಷ್ಣುವರ್ಧನ' ಎಂಬ ನೂತನ ಹೆಸರನ್ನು ದಯಪಾಲಿಸಿದರು. ಈ ಸಂದರ್ಭದ ನೆನಪಿಗಾಗಿ ಅವನು ಹಲವಾರು ಕಡೆ ವಿಷ್ಣು ದೇವಾಲಯಗಳನ್ನು ನಿರ್ಮಿಸಿದ. ರಾಮಾನುಜರು ತೊಂಡನೂರಿನಲ್ಲಿ, 'ತಿರುಮಲಸಾಗರ' ಎನ್ನುವ ಕೆರೆಯನ್ನು ಕಟ್ಟಿಸಿದರು.

ರಾಮಾನುಜರು ಅನಂತರ ಮೇಲುಕೋಟೆಗೆ ಬಂದರು. ಇದನ್ನು 'ತಿರುನಾರಾಯಣ ಪುರ' ಅಥವಾ 'ಯಾದವಗಿರಿ' ಎಂದೂ ಕರೆಯುತ್ತಾರೆ. ಇದು ಆಗ ಕಾಡಿನಿಂದ ಕೂಡಿದ ಗುಡ್ಡಗಾಡಿನ ಪ್ರದೇಶವಾಗಿತ್ತು.

ರಾಮಾನುಜರು ಮೇಲುಕೋಟೆಗೆ ಬಂದಾಗ, ತಿರುನಾರಾಯಣಸ್ವಾಮಿಯ ಮೂಲವಿಗ್ರಹವು ಒಂದು ಹುತ್ತದಲ್ಲಿ ಇದ್ದುದನ್ನು ತಮ್ಮ ದಿವ್ಯದೃಷ್ಟಿಯಿಂದ ಕಂಡುಕೊಂಡರು. ಅದನ್ನು ಹೊರತೆಗೆದು, ಅಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ ಆ ವಿಗ್ರಹವನ್ನು ಸ್ಥಾಪಿಸಿದರು. ದೇವಾಲಯದಲ್ಲಿ ಉತ್ಸವಮೂರ್ತಿ ಇರಲಿಲ್ಲ. ಅದು ದೆಹಲಿಯ ಮುಸಲ್ಮಾನ ದೊರೆಯ ಹತ್ತಿರ ಇದೆ ಎಂದು ಅವರಿಗೆ ಗೊತ್ತಾಯಿತು. ರಾಮಾನುಜರು ಅದನ್ನು ತರಲು ದೆಹಲಿಗೇ ಹೊರಟರು. ಸುಲ್ತಾನನನ್ನು ಭೇಟಿಯಾದರು. ಸುಲ್ತಾನ ಅವರ ವರ್ಚಸ್ಸಿಗೆ ಮಾರುಹೋದನು. ಅರಮನೆಯಲ್ಲಿರುವ ಹಲವಾರು ವಿಗ್ರಹಗಳ ಪೈಕಿ ಒಂದನ್ನು ಆರಿಸಿಕೊಂಡು, ತೆಗೆದುಕೊಂಡು ಹೋಗಿರೆಂದು ಹೇಳಿದನು. ರಾಮಾನುಜರು "ಬಾ ದೊರೆಯೇ, ಶೆಲ್ವಪಿಳ್ಳೆ" ಎಂದು ಕರೆಯಲು ಒಡನೆಯೇ ಆ ವಿಗ್ರಹವೇ ಕುಣಿಯುತ್ತ ಕುಣಿಯುತ್ತ ರಾಮಾನುಜರ ಬಳಿ ಬಂದಿತಂತೆ. ಅದನ್ನು ಅವರು ಮೇಲುಕೋಟೆಗೆ ತಂದರು.


ಆ ಸಮಯದಲ್ಲಿ ಸುಲ್ತಾನನ ಮಗಳು ಅರಮನೆಯಲ್ಲಿ ಇರಲಿಲ್ಲ. ಆ ವಿಗ್ರಹ ಅವಳ ಇಷ್ಟದೈವವಾಗಿತ್ತು. ಅವಳು ತನ್ನ ಪ್ರಾಣವನ್ನೇ ಆ ವಿಗ್ರಹದಲ್ಲಿ ಇಟ್ಟುಕೊಂಡಿದ್ದಳು. ರಾಮಾನುಜರು ಹೋದ ಮೇಲೆ ಅವಳು ಅರಮನೆಗೆ ಬಂದಳು. ನಡೆದ ವಿಷಯ ತಿಳಿದು, ಆ ವಿಗ್ರಹವನ್ನು ಮತ್ತೆ ಪಡೆದುಕೊಳ್ಳಲು ಆಕೆ ರಾಮಾನುಜರನ್ನೇ ಹಿಂಬಾಲಿಸಿದಳು. ಆಚಾರ್ಯರು ಅವಳ ಭಕ್ತಿಗೆ ಮೆಚ್ಚಿದರು; ವಿಗ್ರಹವನ್ನು ಹೊತ್ತುತರುತ್ತಿದ್ದ ಮೇನೆಯಲ್ಲಿಯೇ ಅವಳನ್ನೂ ಕುಳ್ಳಿರಿಸಿದರು. ಆ ವಿಗ್ರಹಕ್ಕೆ 'ರಾಮಪ್ರಿಯ' ಎಂದು ಹೆಸರಾಗಿತ್ತು. ಸ್ವಲ್ಪದೂರ ಹೋದನಂತರ ಮೇನೆ ಹಗುರವಾಗಿರುವಂತೆ ಕಂಡುಬಂತು. ನೋಡಿದರೆ, ಸುಲ್ತಾನನ ಮಗಳು ಅದರಲ್ಲಿ ಇರಲೇ ಇಲ್ಲ. ಕೇವಲ ವಿಗ್ರಹ ಮಾತ್ರ ಇತ್ತು. ಭಕ್ತೆಯಾದ ಆ ಬಾಲಕಿ ತನ್ನ ಆರಾಧ್ಯದೈವ ರಾಮಪ್ರಿಯನಲ್ಲಿ ಐಕ್ಯವಾಗಿದ್ದಳು.

ಮೇಲುಕೋಟೆಗೆ ತಂದ ವಿಗ್ರಹವನ್ನು ಉತ್ಸವಮೂರ್ತಿಯನ್ನಾಗಿ ಮಾಡಲಾಯಿತು. ಸುಲ್ತಾನನ ಮಗಳ ಭಕ್ತಿಯ ಕುರುಹಾಗಿ ಅವಳ ವಿಗ್ರಹವನ್ನೂ ಮಾಡಿಸಿ ಅದರ ಸಮೀಪದಲ್ಲಿ ಇಟ್ಟರು. ಅದನ್ನು 'ಬೀಬಿ ನಾಚ್ಚಿಯಾರ್' ಎಂದು ಕರೆಯುತ್ತಾರೆ.

ಮೇಲುಕೋಟೆಯು ಸಮುದ್ರಮಟ್ಟದಿಂದ ಸುಮಾರು ಮುನ್ನೂರು ಅಡಿ ಎತ್ತರದಲ್ಲಿದೆ. ಅಲ್ಲಿರುವ ಸಣ್ಣ ಗುಡ್ಡದ ಮೇಲೆ ಪ್ರಹ್ಲಾದವರದ ಶ್ರೀನರಸಿಂಹಸ್ವಾಮಿಯ ದೇವಸ್ಥಾನವಿದೆ. ಇಡೀ ಬೆಟ್ಟಕ್ಕೆ ಕೋಟೆ ಕಟ್ಟಿರುವುದರಿಂದ ಇದಕ್ಕೆ 'ಮೇಲುಕೋಟೆ' ಎಂಬ ಹೆಸರು ಬಂದಿದೆ. ಇಲ್ಲಿ ವರ್ಷಕ್ಕೊಮ್ಮೆ ನಡೆಯುವ ವೈರಮುಡಿ ಉತ್ಸವ ಜಗತ್ಪ್ರಸಿದ್ಧವಾದುದು. ವೈರಮುಡಿ ಎಂದರೆ ವಜ್ರದ ಕಿರೀಟ ಎಂದರ್ಥ. ಮೀನ ಮಾಸದ ಚಿತ್ತಾ ನಕ್ಷತ್ರದ ಸಮಯದಲ್ಲಿ ರಾತ್ರಿಯ ವೇಳೆ ಈ ಉತ್ಸವವನ್ನು ಆಚರಿಸುತ್ತಾರೆ. ರಾಮಚಂದ್ರನಿಗೆ ಪಟ್ಟಾಭಿಷೇಕ ನಡೆದ ದಿನ ಇದು ಎಂದು ಪರಂಪರೆ ಹೇಳುತ್ತದೆ. ಅಂದು ದೇವಸ್ಥಾನದ ಮೂಲಮೂರ್ತಿಯನ್ನು ಮತ್ತು ಉತ್ಸವ ಮೂರ್ತಿಯನ್ನು ರಾಮಾನುಜರು ಪ್ರತಿಷ್ಠಾಪನೆ ಮಾಡಿದರೆಂದು ಐತಿಹ್ಯವಿದೆ. ಅದರ ಸ್ಮರಣೆಗಾಗಿ ಪ್ರತಿವರ್ಷವೂ ವೈರಮುಡಿ ಉತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗುತ್ತದೆ.

(ಮುಂದುವರೆಯುವುದು)

# ಶ್ರೀಮದ್ಭಾಗವತ ಸಾರ



ಎ. ಮುರಳೀಧರ

## ದ್ವಿತೀಯ ಸ್ಕಂಧ

**ಪ**ರೀಕ್ಷಿತರಾಜನ ಪ್ರಶ್ನೆಯಿಂದ ಶುಕಾಚಾರ್ಯರಿಗೆ ಬಹಳ ಸಂತಸವಾಯಿತು. ಅವರು ಹೇಳಿದರು, "ರಾಜನ್, ನೀನು ಕೇಳಿದ ಪ್ರಶ್ನೆಗಳು ಲೋಕಕಲ್ಯಾಣ ಉಂಟುಮಾಡುವಂಥ ಪ್ರಶ್ನೆಗಳು. ಇವು ಆತ್ಮಜ್ಞಾನಿಗಳು ಹಾಗೂ ಮೋಕ್ಷಾಪೇಕ್ಷೆ ಉಳ್ಳವರು, ಪರಮಾತ್ಮನ ಬಗ್ಗೆ ತಿಳಿಯುವುದಕ್ಕೆ ಮಾಡಬೇಕಾದ ಸಾಧನೆಯ ಮಾರ್ಗಕ್ಕೆ ಸಂಬಂಧಪಟ್ಟದ್ದಾಗಿವೆ." ಹೀಗೆ ಆತನನ್ನು ಪ್ರಶಂಸಿಸಿ, ಶುಕಾಚಾರ್ಯರು ತಮ್ಮ ಮಾತನ್ನು ಮುಂದುವರೆಸಿದರು:

"ಮೃತ್ಯುಶಯ್ಯೆಯಲ್ಲಿರುವ ವ್ಯಕ್ತಿಯು ಮೊದಲು ಮರಣ ಭಯವನ್ನು ಬಿಡಬೇಕು. ಸಂಸಾರದ ಭಯ, ಆಸೆ, ನಿರಾಸೆಗಳನ್ನು ತೊರೆಯಬೇಕು. ಮರಣವು ಕೇವಲ ದೇಹಕ್ಕೆ ಮಾತ್ರ, ಆತ್ಮನಿಗಲ್ಲ. ಆತ್ಮವು ಚೈತನ್ಯರೂಪಿಯಾದುದು. ಚೈತನ್ಯವನ್ನು ಬೆಂಕಿ ಸುಡಲಾರದು, ನೀರು ತೋಯಿಸಲಾರದು, ಕತ್ತಿಯು ಕತ್ತರಿಸಲಾಗದು, ಇದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅದು ಶಾಶ್ವತವಾದದ್ದು, ನಿತ್ಯವಾದದ್ದು.

"ಕೇವಲ ಪ್ರಾಣಿಗಳಂತೆ ಮಾನವನೂ ವರ್ತಿಸಿದರೆ ಆತನ ಬದುಕಿಗೂ ಪ್ರಾಣಿಗಳ ಬದುಕಿಗೂ ಏನೂ ವ್ಯತ್ಯಾಸ ಇರುವುದಿಲ್ಲ. ಅಂಥ ಬದುಕಿಗೆ ಯಾವ ಅರ್ಥವೂ ಇಲ್ಲದಂತಾಗಿಬಿಡುತ್ತದೆ. ಎಷ್ಟು ವರ್ಷ ಬದುಕಿದರೂ ಅದು ವ್ಯರ್ಥವಾದ ಬದುಕಾಗುತ್ತದೆ. ಜೀವಿಯು ಬದುಕಿನಲ್ಲಿ ಅರ್ಥವನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ನಾವು ಮಾಡಬೇಕಾದ ಕರ್ತವ್ಯವೊಂದಿದೆ. ಅದೇ ಸಕಲ ಕಲ್ಯಾಣಗುಣಪರಿಪೂರ್ಣನೂ, ಸರ್ವದೋಷರಹಿತನೂ, ಸರ್ವಾಂತರ್ಯಾಮಿಯೂ ಮತ್ತು ಸರ್ವಲೋಕನಿಯಾಮಕನೂ ಆದ ಭಗವಂತನ ಗುಣಮಹಿಮೆಗಳನ್ನು ಶ್ರವಣ ಮಾಡುವುದು ಮತ್ತು ಕೀರ್ತನೆ ಮಾಡುವುದು. ಇದೇ ನಮ್ಮನ್ನು ಮೋಕ್ಷಕ್ಕೆ ಕರೆದೊಯ್ಯುವ ರಾಜಮಾರ್ಗ."

ಅನಂತರ ಶುಕಾಚಾರ್ಯರು ಸೂರ್ಯವಂಶದ ರಾಜನಾದ ಖಟ್ವಾಂಗನ ಕಥೆಯನ್ನು ಹೇಳಿದರು. ಅವನು ಮಹಾಪರಾಕ್ರಮಿ. ಇಡೀ ಭೂಮಂಡಲವನ್ನು ಅವನು ತನ್ನ ಅಂಕೆಯಲ್ಲಿಸಿರಿಕೊಂಡಿದ್ದನು. ನಿಯಮಿತವಾಗಿ ಯಜ್ಞ ಕಾರ್ಯವನ್ನು ಮಾಡುತ್ತಿದ್ದನು. ಇದರಿಂದ ದೇವೇಂದ್ರ ಮತ್ತು ಅಷ್ಟದಿಕ್ಪಾಲಕರು ಅವನ ಬಗ್ಗೆ ಸಂತುಷ್ಟಿಯಿಂದ ಇದ್ದರು. ಇದಲ್ಲದೆ ಆತನು ದೇವದಾನವರ ಯುದ್ಧದಲ್ಲಿ ದೇವತೆಗಳ ಪರವಾಗಿ ಹೋರಾಡಿ, ಅವರಿಗೆ ಜಯವನ್ನು ತಂದುಕೊಟ್ಟನು.

ಇದರಿಂದ ಆನಂದಿತರಾದ ದೇವತೆಗಳು ಯಾವುದಾದರೂ ಒಂದು ವರವನ್ನು ಕೇಳುವಂತೆ ರಾಜನಿಗೆ ಹೇಳಿದರು. ಅದಕ್ಕೆ ರಾಜನು ತನ್ನ ಆಯುಸ್ಸು ಇನ್ನೂ ಎಷ್ಟಿರಬಹುದು ಎಂದು ಪ್ರಶ್ನಿಸಿದನು. ದೇವತೆಗಳು ತಮ್ಮ ಜ್ಞಾನದೃಷ್ಟಿಯಿಂದ ನೋಡಿ, ಇನ್ನು ಕೇವಲ ಒಂದೂವರೆ ಘಳಿಗೆ ಮಾತ್ರ ಉಳಿದಿದೆ ಎಂದರು. ರಾಜನು ವಿಮಾನಾರೂಢನಾಗಿ ರಾಜಧಾನಿಗೆ ಹಿಂತಿರುಗಿದನು. ಹೆಂಡತಿ ಮಕ್ಕಳು ರಾಜ್ಯ ಎಲ್ಲವನ್ನೂ ತೊರೆದನು. ದೃಢಮನಸ್ಕನಾಗಿ ಶ್ರೀಹರಿಯನ್ನು ನೆನೆಸುತ್ತಾ ಮೋಕ್ಷವನ್ನು ಪಡೆದುಕೊಂಡನು.

ಶುಕಾಚಾರ್ಯರು ಮುಂದುವರೆಸುತ್ತಾರೆ: "ಹೀಗೆ ಖಟ್ವಾಂಗನು ಕೇವಲ ಒಂದೂವರೆ ಘಳಿಗೆಯಲ್ಲಿ ಮುಕ್ತಿಯನ್ನು ಪಡೆದನು. ಪರೀಕ್ಷಿತರಾಜ, ನಿನಗಾದರೋ ಏಳು ದಿವಸಗಳ ಅವಧಿ ಇದೆ. ನಿನ್ನ ಶ್ರದ್ಧಾಭಕ್ತಿಯು ಖಂಡಿತ ನಿನ್ನನ್ನು ವೈಕುಂಠಲೋಕಕ್ಕೆ ಕರೆದೊಯ್ಯುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ."

ವೇದಗಳಲ್ಲಿ ನಾನಾ ವಿಧವಾದ ಫಲಗಳನ್ನು ಹೇಳಿವೆ. ಅವನ್ನು ಪಡೆಯಲು ಬೇಕಾದ ನಾನಾ ವಿಧವಾದ ಸಾಧನೆಗಳ ವಿವರಗಳೂ ಅವುಗಳಲ್ಲಿ ಇವೆ. ಈ ಸಾಧನೆಗಳನ್ನು ನಾವು ಲೌಕಿಕ ಸುಖ ಸಂತೋಷಗಳನ್ನು ಮಾತ್ರ ಉದ್ದೇಶವನ್ನಾಗಿ ಇಟ್ಟುಕೊಂಡು ಮಾಡಿದರೆ ಕೇವಲ ಕ್ಷಣಿಕವಾದ ಫಲ ಸಿಗುತ್ತದೆ. ಹೆಚ್ಚೆಂದರೆ, ಅದು ಕೇವಲ ಸ್ವರ್ಗಪ್ರಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ. ಲೌಕಿಕ ಭೋಗಗಳು ನಮ್ಮ ಕರ್ಮಾನುಸಾರ ಸಿಕ್ಕೇ ಸಿಗುತ್ತವೆ. ಆದ್ದರಿಂದ ನಮ್ಮ ಸಾಧನೆಯ ಉದ್ದೇಶ ಕೇವಲ ಲೌಕಿಕವಾಗಿರಬಾರದು. ವೈರಾಗ್ಯವನ್ನು ಹೊಂದಿ ಭಗವಂತನನ್ನು ಧ್ಯಾನಿಸುವುದು, ಆರಾಧಿಸುವುದು – ಇವೇ ನಮ್ಮ ಪ್ರಮುಖ ಸಾಧನೆಯಾಗಬೇಕು. ಈ

ಎಲ್ಲ ಸಾಧನೆಗಳ ಉದ್ದೇಶ ಸಂಸಾರಬಂಧನದಿಂದ ಮುಕ್ತನಾಗಿ ಶಾಶ್ವತ ಸುಖವನ್ನು ಪಡೆಯುವುದು ಎನ್ನುವುದನ್ನು ನಾವು ಮನ ಗಾಣಬೇಕು.

ದೇಹವನ್ನು ತ್ಯಾಗ ಮಾಡಿದ ಮೇಲೆ ಸಾಧಾರಣವಾಗಿ ಜೀವಿಯು ತನ್ನ ಕರ್ಮಾನುಸಾರ ಯಾವುದೋ ಒಂದು ಲೋಕಕ್ಕೆ ಪಯಣಿಸುವನು. ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾದ ಮಹಾತ್ಮ ನಾದರೋ ಹಲವಾರು ಹಂತಗಳನ್ನು ದಾಟಿ, ನಿತ್ಯಾನಂದದ ಪರಮನೆಲೆಯಾದ ವೈಕುಂಠ ಲೋಕವನ್ನು ಸೇರುವನು. ಅಲ್ಲಿ ಚಿದ್ಘನನಾದ ಪರಮಾತ್ಮನ ಸಾನ್ನಿಧ್ಯವನ್ನು ಅವನು ಅನವರತವೂ ಪಡೆಯುವನು.

ಅನಂತರ ಶುಕಾಚಾರ್ಯರು ಈ ಲೋಕವು ಸೃಷ್ಟಿಯಾದ ಬಗೆ ಯನ್ನು ವಿವರಿಸುತ್ತಾರೆ. ಶ್ರೀಮನ್ನಾರಾಯಣನು ಪ್ರಕೃತಿ ಹಾಗೂ ಜೀವ – ಈ ಎರಡಕ್ಕೂ ಆಧಾರಭೂತನಾಗಿದ್ದಾನೆ. ವಿಶ್ವದ ಒಳಗೆ ಮತ್ತು ಹೊರಗೆ – ಎಲ್ಲ ಕಡೆಯೂ ವ್ಯಾಪಿಸಿದ್ದಾನೆ. ಚತುರ್ಮುಖ ಬ್ರಹ್ಮನ ಪ್ರೇರಕಶಕ್ತಿಯಾಗಿ ಇವನೇ ಸೃಷ್ಟಿಕಾರ್ಯವನ್ನು ಮಾಡು ತ್ತಾನೆ. ವಿಷ್ಣುರೂಪದಿಂದ ಸ್ವತಃ ತಾನೇ ಸ್ಥಿತಿಕಾರ್ಯವನ್ನು ನಿರ್ವಹಿಸುತ್ತಾನೆ. ಮತ್ತೆ ರುದ್ರನ ರೂಪದಲ್ಲಿದ್ದು ಲಯ ಕಾರ್ಯ ವನ್ನೂ ಮಾಡುತ್ತಾನೆ.

ಪರಮಪುರುಷನಿಂದ ಪ್ರೇರಿತವಾಗಿ ಮಹತ್ ತತ್ತ್ವ ಜನಿಸು ತ್ತದೆ. ಇದೇ ಅಹಂಕಾರತತ್ತ್ವವಾಗಿ ಪರಿಣಮಿಸುವುದು. ಇದೇ ಮುಂದೆ ಸಾತ್ವಿಕ, ರಾಜಸ ಮತ್ತು ತಾಮಸ ಅಹಂಕಾರಗಳಾಗಿ ವಿಭಜನೆ ಹೊಂದುವುದು.

ಸಾತ್ವಿಕ ಅಹಂಕಾರದಿಂದ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಮತ್ತು ಮನಸ್ಸು ಉಂಟಾಗುತ್ತವೆ. ರಾಜಸ ಅಹಂಕಾರವು ಇಂದ್ರಿಯಗಳೊಡನೆ ಬೆರೆತು ಕ್ರಿಯಾತ್ಮಕಶಕ್ತಿಯಾಗಿ ಪರಿಣಮಿಸುತ್ತದೆ. ಇದೇ ಮುಂದೆ ಕಾಲಕರ್ಮಾನುಸಾರ ಬ್ರಹ್ಮಾಂಡದ ಉತ್ಪತ್ತಿಗೆ ಕಾರಣವಾಗುತ್ತದೆ. ಇಂಥ ಜಗತ್ತಿನ ಪಾಲನೆಗಾಗಿ ಭಗವಂತನು ಅನೇಕ ಅವತಾರಗಳನ್ನು ಎತ್ತುತ್ತಾನೆ. ಭಾಗವತವು ಅಂತಹ ಇಪ್ಪತ್ತೆರಡು ಅವತಾರಗಳನ್ನು ಹೆಸರಿ ಸುತ್ತದೆ. ಅವು ಹೀಗಿವೆ: ಮುನಿಕುಮಾರರು, ಆದಿವರಾಹ, ನಾರದ, ನರನಾರಾಯಣ, ಕಪಿಲ, ದತ್ತಾತ್ರೇಯ, ಯಜ್ಞ, ಋಷಭ, ಪೃಥು, ಮತ್ಸ್ಯ, ಕೂರ್ಮ, ಧನ್ವಂತರಿ, ಮೋಹಿನಿ, ನರಸಿಂಹ, ವಾಮನ, ಪರಶುರಾಮ, ವ್ಯಾಸ, ಶ್ರೀರಾಮ, ಬಲರಾಮ, ಶ್ರೀಕೃಷ್ಣ, ಬುದ್ಧ ಮತ್ತು ಭವಿಷ್ಯದಲ್ಲಿ ಕಲ್ಕಿ. (*೧ನೇ ಸ್ಕಂಧ, ೩ನೇ ಅಧ್ಯಾಯ*) ತಾಮಸ ಅಹಂಕಾರದಿಂದ ಪಂಚಮಹಾಭೂತಗಳಾದ ಆಕಾಶ, ವಾಯು, ಜಲ, ಅಗ್ನಿ ಮತ್ತು ಪೃಥ್ವಿಗಳು ಹುಟ್ಟುತ್ತವೆ. ಆಕಾಶದಿಂದ ಶಬ್ದ, ವಾಯುವಿನಿಂದ ಸ್ಪರ್ಶ, ಅಗ್ನಿಯಿಂದ ರೂಪ, ನೀರಿನಿಂದ ರಸ ಮತ್ತು ಭೂಮಿಯಿಂದ ಗಂಧ – ಹೀಗೆ ಆಯಾ ವಿಷಯಗಳು ಉದ್ಭವವಾಗುತ್ತವೆ.

ಮಹಾಪ್ರಳಯದ ನಂತರ ಶ್ರೀಮನ್ನಾರಾಯಣನು ಪುನಃ ಸೃಷ್ಟಿಕಾರ್ಯವನ್ನು ಆರಂಭಿಸಿದನು. ಮೊದಲು ತನ್ನ ನಾಭಿ ಯಿಂದ ಕಮಲವನ್ನು ಸೃಷ್ಟಿಸಿದನು. ಅದರಲ್ಲಿ ಚತುರ್ಮುಖ ಬ್ರಹ್ಮನು ಕಾಣಿಸಿಕೊಂಡನು. ಅವನಿಗೆ ಮೊದಮೊದಲು ಏನೂ ತೋಚಲಿಲ್ಲ. ಅವನು ಭಗವಂತನನ್ನು ಕುರಿತು ತಪಸ್ಸು ಮಾಡಿ ದನು. ಆಗ ಶ್ರೀಹರಿಯು ತನ್ನ ಸಾನ್ನಿಧ್ಯದ ದರ್ಶನವನ್ನು ಅವನಿಗೆ ಮಾಡಿಸಿದನು. ಇದರಿಂದ ಸಂತೋಷಗೊಂಡ ಬ್ರಹ್ಮನು ಭಗವಂತನನ್ನು ಪ್ರಾರ್ಥಿಸಿದನು. ಭಗವಂತನ ಆಶಯದಂತೆ ಸಮಸ್ತ ಚರಾಚರ ಸೃಷ್ಟಿಯನ್ನು, ಆತನ ಪ್ರೇರಣೆಯಿಂದಲೇ, ಮಾಡಿದನು.

ಕಾಲ ಎಂಬುದು ಕಣ್ಣಿಗೆ ಕಾಣದ ಅಗೋಚರ ವಸ್ತು. ಅದನ್ನು ಅದರ ಕಾರ್ಯದಿಂದ ಮಾತ್ರ ಊಹಿಸಬಹುದು. ಸೃಷ್ಟಿಯೇ ಮೊದಲಾದ ಯಾವುದೇ ಕಾರ್ಯವೂ, ಕಾಲವನ್ನು ಬಿಟ್ಟು ನಡೆಯಲಾರದು. ಆದ್ದರಿಂದ, ಈಶ್ವರನೇ ಕಾಲರೂಪಿ ಯಾಗಿರುವನೆಂದು ಊಹಿಸಿಕೊಳ್ಳಬಹುದು. ಸೃಷ್ಟಿಯು ಕಾಲಕ್ಕೆ ಅಧೀನವಾಗಿದೆ. ಅನಂತರ ಈ ಕಾಲದ ಗಣನೆಯನ್ನು ಶುಕಾ ಚಾರ್ಯರು ವಿಸ್ತಾರವಾಗಿ ವಿವರಿಸುತ್ತಾರೆ.

## ತೃತೀಯ ಸ್ಕಂಧ

ಪಾಂಡುರಾಜನು ಮರಣ ಹೊಂದಿದಾಗ ಆತನ ಅಣ್ಣನಾದ ಧೃತರಾಷ್ಟ್ರನು ಪಾಂಡವರನ್ನು ವಾತ್ಸಲ್ಯದಿಂದ ಕಾಣಲಿಲ್ಲ. ತನ್ನ ಮಕ್ಕಳಾದ ಕೌರವರ ಮೇಲಿನ ಅತಿಯಾದ ವ್ಯಾಮೋಹದಿಂದಾಗಿ, ಪಾಂಡವರನ್ನು ತಾತ್ಸಾರದಿಂದ ಬೆಳೆಸಿದನು. ತನ್ನ ಮಕ್ಕಳು ಪಾಂಡವರಿಗೆ ಎಷ್ಟೇ ಅನ್ಯಾಯ ಮಾಡಿದರೂ ಅವರನ್ನು ಶಿಕ್ಷಿಸದೆ, ಅವರಿಗೆ ರಕ್ಷಣೆಯನ್ನು ನೀಡಿದನು. ಇಂತಹ ಕುರುಡು ಪ್ರೇಮದಿಂದಾಗಿಯೇ ಪಾಂಡವರು ಮೋಸದ ಜೂಜಿಗೆ ಒಳಗಾಗಿ ವನವಾಸ ಅನುಭವಿಸಿದರು. ಅಷ್ಟುಮಾತ್ರವಲ್ಲದೆ ಅವರಿಗೆ ಸಿಕ್ಕಬೇಕಾದ ರಾಜ್ಯ ಕೂಡ ಸಿಗಲಿಲ್ಲ. ಸ್ವತಃ ಶ್ರೀಕೃಷ್ಣನೇ ರಾಯಭಾರಿಯಾಗಿ ಬಂದರೂ ಧೃತರಾಷ್ಟ್ರನು ತನ್ನ ಮಗ ದುರ್ಯೋಧನನ ಹಠಕ್ಕೆ ತಲೆಬಾಗಿದನು. ಮಗನನ್ನು ಕರೆಸಿ, ವಿದುರನನ್ನೂ ಕರೆಸಿ, "ನಾನು ಈಗ ಏನು ಮಾಡಲಿ?" ಎಂದು ಕೇಳಿದನು. ವಿದುರನು ಮಹಾಜ್ಞಾನಿಯೂ, ಸಾತ್ವಿಕಜೀವಿಯೂ ಆಗಿದ್ದನು. ಅವನು ನೇರಸ್ವಭಾವದವನೂ, ನಿಷ್ಪಕ್ಷಪಾತಿಯೂ ಆಗಿದ್ದನು. ಅವನು ಧೃತರಾಷ್ಟ್ರನ ಈ ಪಕ್ಷಪಾತದ ರಾಜನೀತಿಯನ್ನು ಖಂಡಿಸಿದನು. ಸ್ವತಃ ಶ್ರೀಕೃಷ್ಣನೇ ಬಂದು ಕೇಳಿದರೂ, ಪಾಂಡವ ರಿಗೆ ಅರ್ಧ ರಾಜ್ಯವನ್ನು ಕೊಡದಿರುವ ವಂಚನೆಯನ್ನು ಅವನು ವಿರೋಧಿಸಿದನು. "ಪಾಂಡವರು ದೈವಬಲವುಳ್ಳವರು. ಶ್ರೀಕೃಷ್ಣನ ಬೆಂಬಲ ಅವರಿಗಿದೆ. ಮುಂದೆ ಯುದ್ಧ ನಡೆದಲ್ಲಿ ನಿನ್ನ ವಂಶ ನಾಶವಾಗುವುದು ಖಂಡಿತ" ಎಂದನು. ಈ ಮಾತನ್ನು ಕೇಳಿದ ದುರ್ಯೋಧನನು ವಿದುರನ ಮೇಲೆ ಕೆಂಡಕಾರಿದನು. ಸಾತ್ವಿಕ ನಾದ ವಿದುರನಿಗೆ ಅರಮನೆಯ ಪರಿಸ್ಥಿತಿಯನ್ನು ಕಂಡು ಅಸಹ್ಯ ವಾಯಿತು. ಇವರ ಹಂಗೇ ಬೇಡವೆಂದು ತೀರ್ಥಯಾತ್ರೆಗೆ ಹೊರಟನು. ಯಾತ್ರೆಯಲ್ಲಿ ಸಜ್ಜನರ, ಋಷಿಮುನಿಗಳ ಸಂಪರ್ಕ ದಿಂದ, ತನ್ನ ಪಾಪಕರ್ಮಗಳನ್ನು ತೊಳೆದುಕೊಂಡನು.

ಶ್ರೀರಂಗ, ವೆಂಕಟಾಚಲ, ಹಸ್ತಿಗಿರಿ, ಯಾದವಗಿರಿ – ಈ ಪ್ರದೇಶಗಳ ಯಾತ್ರೆಗಳನ್ನು ಮುಗಿಸಿಕೊಂಡು ವಿದುರನು ಪ್ರಭಾಸ ಕ್ಷೇತ್ರಕ್ಕೆ ಬಂದನು. ಅಲ್ಲಿ ಅವನಿಗೆ, ಕುರುಕ್ಷೇತ್ರ ಯುದ್ಧ ಮುಗಿದು ಕೌರವರೆಲ್ಲ ಹತರಾಗಿ, ಧರ್ಮರಾಜನು ರಾಜ್ಯವಾಳುತ್ತಿದ್ದಾನೆಂಬ ವರ್ತಮಾನ ತಿಳಿಯಿತು. ಅಲ್ಲಿಂದ ಮುಂದೆ ಅವನು ಸರಸ್ವತೀ ನದಿತೀರಕ್ಕೆ ಬಂದನು. ಅಲ್ಲಿ ಅವನಿಗೆ ಯಾದವರ ಮಂತ್ರಿಯೂ ಶ್ರೀಕೃಷ್ಣನ ಬಾಲ್ಯಸ್ನೇಹಿತನೂ ಆದ ಭಕ್ತಶಿರೋಮಣಿ ಉದ್ಧವನ ದರ್ಶನವಾಯಿತು. ಉದ್ಧವನನ್ನು ಕಂಡ ಕೂಡಲೇ ವಿದುರನಿಗೆ